# <u>ಶ್ರೀನಿವಾಸನು ಬಂದ ಕೋನೇರಿ ತಿಮ್ಮಪ್ಪ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 537.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 329.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics in both the references are matching.
5. **Note:** Singer has followed these lyrics.

ರಾಗ: ಭೈರವಿ ತಾಳ: ಅಟ

ಶ್ರೀನಿವಾಸನು ಬಂದ ಕೋನೇರಿ ತಿಮ್ಮಪ್ಪ
ವಾಣಿಯರಸನಯ್ಯನು || ಪ ||

ವೇಣುಗಾನಲೋಲ ಮೋಸಮಾಡಲು ಬಂದ
ದೀನ ರಕ್ಷಕನಯ್ಯ ಮೋಹನ ಕೃಷ್ಣ || ಅಪ ||

ಪತಿತ ಪಾವನ ಬಂದ ಸಚ್ಚಿದಾನಂದನು
ಹಿತಕರನು ಬಂದ ನಿಖಿಳ ವೇದ
ಪ್ರತಿಪಾದ್ಯನು ಬಂದ ಹಿಗ್ಗುತಲಿ ನಿಂದ
ಮತಿಗೆಡಿಸಿ ಪೋದನಯ್ಯ ಮುದ್ದು ರಂಗಯ್ಯ ಕೃಷ್ಣ || 1 ||

ಉಡುಪಿ ನಿಲಯ ಬಂದ ಉಡುಪನಂತೊಪ್ಪೆಯುತ
ತಟಿಯಂತೆ ಮರೆಯಾದ ಕಾಣಬಾರದ ವಸ್ತು
ಉಟ್ಟದ್ದು ತೊಟ್ಟದ್ದು ಇಟ್ಟದ್ದು ನೋಡಲು
ಅಷ್ಟು ಮಾಯವಯ್ಯ ಬಲು ಮಾಯವಯ್ಯ || 2 ||

ಏಸು ಹರುಷವೊ ಏಸು ಕರುಣವೊ
ಕಾಸು ಬಾಳದ ಎನಮ್ಯಾಲೆ ಮುದ್ದು ಕೃಷ್ಣಯ್ಯಗೆ
ವಾಸುಕಿ ಶಯನನು ತಂದೆ ಪುರಂದರ ವಿಠಲ
ಶೇಷಾದ್ರಿ ವಾಸನಯ್ಯ ಕೇಳಣ್ಣಯ್ಯ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಕೋನೇರಿ** – ಸ್ವಾಮಿ ಪುಷ್ಕರಿಣೀ ಎಂಬ ಕೊಳ.

**ತಿಮ್ಮಪ್ಪ** – ತಿರುಮಲೆಯಪ್ಪ.

**ವಾಣಿಯರಸನಯ್ಯನ** – ಸರಸ್ವತಿಯ ಗಂಡನಾದ ಬ್ರಹ್ಮನ ತಂದೆಯ, ಎಂದರೆ ವಿಷ್ಣುವಿನ.

**ಮೋಸ ಮಾಡಲು ಬಂದ** – ದೈತ್ಯರನ್ನು ವಂಚಿಸಿ ದೇವತೆಗಳಿಗೆ ಅಮೃತವನ್ನು ಒದಗಿಸಿಕೊಡಲು ಮೋಹಿನಿಯಾಗಿ.

**ಪತಿತವಾಹನ (ಪತಿತ ಪಾವನ)** – ಪತಿತ್ರಿವಾಹನ ಎಂಬುದರ ರೂಪಾಂತರವೋ (ಪತತ್ರಿಯೆಂದರೆ ಪಕ್ಷಿ, ಗರುಡ ಅದನ್ನೇರಿ ಸಾಗುವವನು) ಅಥವಾ **ಪತಿತ ಪಾವನ** (ಪಾಪಿಗಳನ್ನು ಪವಿತ್ರಗೊಳಿಸುವವನು) ಎಂಬುದರ ಅಶುದ್ಧ ಪಾಠವೋ ಇದ್ದೀತು.

**ನಿಖಿಳವೇದ ಪ್ರತಿಪಾದ್ಯನು** – ಎಲ್ಲ ವೇದಗಳೂ ಅವನ ಹಿರಿಮೆಯನ್ನು ಹೇಳಲೆಂದೇ ಹೊರಟಿರುವುವು.

**ಮತಿಗೆಡಿಸಿ** – ನನ್ನನ್ನು ಮರುಳು ಮಾಡಿ.

**ಉಡುಪನಂತೆ ಹೊಳೆಯುತ** – ಚಂದ್ರನಂತೆ ಬೆಳಗುತ್ತ; 'ಉಡು', ನಕ್ಷತ್ರಗಳಿಗೆ, 'ಪ', ಒಡೆಯ, ಚಂದ್ರ.

**ತಟಿಯಂತೆ** – ತಟಿತ್ತಿನಂತೆ; ಮಿಂಚಿನಂತೆ.

**ಕಾಣಬಾರದ ವಸ್ತು** – ಕಾಣಲು ಬಾರದ. ಇಂದ್ರಿಯ ಗೋಚರವಲ್ಲದ ತತ್ತ್ವ.

**ಅಷ್ಟು ಮಾಯವಯ್ಯ** – ತುಂಬ ಮೋಹಕ.

**ಕಾಸುಬಾಳದ ಎನ್ನಮೇಲೆ** – ನಿರ್ಗತಿಕನಾಗಿ, ಯೋಗ್ಯತೆಯೂ ಇಲ್ಲದ ನನ್ನನ್ನು ಕುರಿತು.

**Classification:** Keerthane

**Ankita:** tande purandara vittala

**Location:** Tirupati

**Category:** Srinivasa Stuti,

**Sub-Category:** srinivasa, arasa, mosa, mohana, Krishna, veda, ranga, Udupi, maya, santosha, karuna, shesha,

**Pravachana:** NA

**Explanation:** NA